3)	ಮೇಲುಕೋಟೆ ಹೊರಠಾಣೆ	ಸಿ.ಹೆಚ್.ಸಿ.	1	1	–
		ಸಿ.ಪಿ.ಸಿ	4	3	1
	ಒಟ್ಟು		5	4	1

ಖ) ಈ ತಾಲ್ಲೂಕಿನಲ್ಲಿರುವ ಅರಕ್ಷಕ ಠಾಣೆಗಳಲ್ಲಿ ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ, ಸಿಬ್ಬಂದಿಯನ್ನು ತುಂಬಲು ಸರ್ಕಾರ ಕ್ರಮ ಕೈಗೊಂಡಿದೆಯೇ? ಎಂದಿನಿಂದ ಸಿಬ್ಬಂದಿಯನ್ನು ತುಂಬಲಾಗುವುದು? (ಸಂಪೂರ್ಣ ಮಾಹಿತಿಯನ್ನು ನೀಡುವುದು)

ಮಂಡ್ಯ ಜಿಲ್ಲೆಯಲ್ಲಿ ಹೊಸದಾಗಿ ನೇಮಕಗೊಂಡಿರುವ 124 ನಾಗರೀಕ ಪೇದೆಗಳನ್ನು ಬುನಾದಿ ತರಬೇತಿಗಾಗಿ ನಿಯೋಜಿಸಲಾಗಿದ್ದು, ತರಬೇತಿಯಿಂದ ಬಂದ ನಂತರ ಖಾಲಿ ಹುದ್ದೆಗಳನ್ನು ತುಂಬಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (413)245
ಮಾನ್ಯ ಸದಸ್ಯರ ಹೆಸರು : ಶ್ರೀ ರಾಜಶೇಖರ ಬಸವರಾಜ ಪಾಟೀಲ್
ಉತ್ತರಿಸುವ ಸಚಿವರು : (ಶ್ರೀ ಆರ್.ಅಶೋಕ)
: ಮಾನ್ಯ ಸಾರಿಗೆ ಸಚಿವರು

ಅ) ಹುಮ್ನಾಬಾದ್ ವಿಧಾನಸಭಾ ಕ್ಷೇತ್ರದಲ್ಲಿ ಎಲ್ಲೆಲ್ಲಿ ರಾಜ್ಯ ರಸ್ತೆ ಸಾರಿಗೆ ಸಂಪರ್ಕದ ಕೊರತೆಯಿದೆ;(ವಿವರ ನೀಡುವುದು);

ಹುಮ್ನಾಬಾದ್ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 87 ಹಳ್ಳಿಗಳಿರುತ್ತವೆ. ಈ ಪೈಕಿ, 86 ಹಳ್ಳಿಗಳಿಗೆ ಸಾರಿಗೆ ಸೌಕರ್ಯ ಕಲ್ಪಿಸಲಾಗಿದೆ. ಘಾತಿಮಾಪುರ ಗ್ರಾಮಕ್ಕೆ ಬಸ್ ಕಾರ್ಯಾಚರಣೆಗೆ ರಸ್ತೆ ಸರಿಯಿಲ್ಲದ ಕಾರಣ ಸಾರಿಗೆ ಸೌಕರ್ಯ ಕಲ್ಪಿಸಲಾಗಿಲ್ಲ.

ಆ) ಈ ಕೊರತೆಯನ್ನು ಪರಿಹರಿಸಲು ಕೈಗೊಂಡ ಕ್ರಮಗಳ ವಿವರ ನೀಡುವುದು?

ಘಾತಿಮಾಪುರ ಗ್ರಾಮದ ಹತ್ತಿರ ಅಡಿಗಾಲುವೆ ಜಖಂಗೊಂಡಿರುತ್ತದೆ. ಸದರಿ ಅಡಿಗಾಲುವೆ ದುರಸ್ತಿ ಕಾರ್ಯ ಮುಗಿದ ನಂತರ ಈ ಗ್ರಾಮಕ್ಕೆ ಸಾರಿಗೆ ಸೌಕರ್ಯ ಕಲ್ಪಿಸಲಾಗುವುದು.